ತಂದು ಹೊಡೆದ ಮೇಲೆ ಬಾಕಿ ಗಿಡಗಳು ಉಳಿದಿದ್ದು. ನಂತರ ಬಂದ ಎಲೆಚುಕ್ಕಿ ರೋಗ, ಬೆಂಕಿ ರೋಗಗಳಿಂದ ಗಿಡಗಳನ್ನು ರಕ್ಷಿಸುವಾಗ ಸಾಕುಬೇಕೆನಿಸಿತ್ತು. ತೋಟಕ್ಕೆ ರೋಗಗಳು ಬಂದರೆ ಔಷಧಿಯನ್ನೋ, ಗೊಬ್ಬರವನ್ನೋ ಹಾಕಿ ರಕ್ಷಿಸಿಕೊಳ್ಳಬಹುದಿತ್ತು. ಆದರೆ ತೋಟಕ್ಕೆ ಕಾಡುಪ್ರಾಣಿಗಳ ಕಾಟ ಪ್ರಾರಂಭವಾದರೆ ಯಾವ ಔಷಧ ಹಾಕುವುದೆಂಬ ಸಮಸ್ಯೆ ಬೊಮ್ಮನಿಗೆ ಕಾಡಿತ್ತು. ಆಗಿದ್ದು ಇಷ್ಟೇ. ಎಲ್ಲಿಂದಲೋ ಒಂದಷ್ಟು ಕಾಡು ಹಂದಿಗಳು ಬಂದು ದಿನಾ ರಾತ್ರಿ ತೋಟದಲ್ಲಿ ದಾಂಧಲೆಯನ್ನು ಮಾಡಿಹೋಗುತ್ತಿದ್ದವು. ಅದು ಮಾಡಿದ ದಾಂಧಲೆಗೆ ಗಿಡಗಳು ಹಾಳಾಗಿ, ಅವನ್ನು ಸರಿ ಮಾಡುವುದು ದೊಡ್ಡ ಕೆಲಸವಾಗಿತ್ತು. ಹಂದಿ ಕಾಟವನ್ನು ತಪ್ಪಿಸುವುದಕ್ಕೆ ತನ್ನ ತೋಟದ ಸುತ್ತ ಅಗಳವನ್ನು ಮಾಡಿ, ಅದರ ಮೇಲೆ ಕಾರೆ ಮುಳ್ಳನ್ನು ಹಾಕಿದ್ದ. ಅದು ಒಂದಷ್ಟು ದಿನಗಳವರೆಗೆ ಯಶಸ್ವಿಯಾದಂತೆ ಅನ್ನಿಸಿತು. ಆದರೆ ಅವನ ತಂತ್ರವನ್ನು ಮುರಿಯುವುದಕ್ಕೆ ಕಾಯುತ್ತಿದ್ದ ಹಂದಿಗಳು, ಮತ್ತೆ ತೋಟಕ್ಕೆ ಮುಗಿಬಿದ್ದಿದ್ದವು. ಮತ್ತೊಂದು ಪ್ರಯತ್ನವಾಗಿ ಮನೆಯ ನಾಯಿಗಳಾದ ಬೈರಾ, ಟಾಮಿಗೆ ಬೇಟೆಯ ತರಬೇತಿಯನ್ನೂ ನೀಡಿ, ಅವುಗಳಿಂದ ಹಿಡಿಸುವ ಪ್ರಯತ್ನವನ್ನೂ ಮಾಡಿದ್ದ. ಆದರೆ ಸಮಸ್ಯೆ ಎಂದರೆ ಅವಕ್ಕೆ ಸೂಚನೆಯನ್ನು ನೀಡಿದರೆ ಮಾತ್ರ ಹಿಡಿಯುವುದಕ್ಕೆ ಪ್ರಯತ್ನಿಸುತ್ತಿದ್ದವೇ ವಿನಃ ತಾವಾಗಿಯೇ ಬೇಟೆಯನ್ನು ಗುರುತಿಸಿ ಮಾಡುವುದಕ್ಕೆ ತಿಳಿಯುತ್ತಿರಲಿಲ್ಲ. ಹೀಗಾಗಿ ನಾಯಿಗಳಿಂದಲೂ ಸಹ ಬೊಮ್ಮನನ್ನು ಹಂದಿಕಾಟದಿಂದ ಮುಕ್ತವಾಗಿಸಲು ಸಾಧ್ಯವಾಗಿರಲಿಲ್ಲ. ಕೊನೆಗೆ ತನ್ನೆಲ್ಲ ಪ್ರಯತ್ನವೂ ಸೋತಂತೆ, ತಾನೇ ಹಂದಿಯ ಕಾವಲಿಗೆ ನಿಲ್ಲುವುದಕ್ಕೆ ನಿರ್ಧರಿಸಿ, ಹಕ್ಕೆ ಮನೆಯನ್ನು ತೋಟದ ಬಳಿಯಲ್ಲಿ ಮಾಡಿಕೊಂಡಿದ್ದ. ರಾತ್ರಿಯಾಗುತ್ತಿದ್ದಂತೆ ಹಕ್ಕೆ ಮನೆಯ ಮುಂದೆ, ಬೆಂಕಿಯನ್ನು ಹಾಕಿ ಹಂದಿ ಬರದಂತೆ ನೋಡಿಕೊಳ್ಳುತ್ತಿದ್ದ. ಸ್ವಲ್ಪ ದಿನ ಕಾಲ ಹಂದಿಗಳು ತೋಟದ ಬಳಿ ಸುಳಿಯಲಿಲ್ಲ. ಬೊಮ್ಮನಿಗೆ ಸ್ವಲ್ಪ ನೆಮ್ಮದಿಯಾಯಿತು. ಆದರೆ ಏನು ಮಾಡೋಣ, ತೋಟಕ್ಕೆ ದಾಳಿ ಇಡಬೇಕು ಎಂದು ನಿಶ್ಚಯಿಸಿಕೊಂಡ ಮೇಲೆ ಹಂದಿಗಳು ಸುಮ್ಮನುಳಿಯುವುದಕ್ಕೆ ಸಾಧ್ಯವೇ? ಬೆಳಗ್ಗಿನ ಜಾವದ ಹಕ್ಕೆಯ ಬೆಂಕಿ ಆರುವ ಸಮಯದಲ್ಲಿ ಹಂದಿ ಬಂದು, ತೋಟವನ್ನು ಹಾಳು ಮಾಡಿ ಹೋಗುತ್ತಿದ್ದವು.

ಇನ್ನು ಕೊನೆ ಅಸ್ತ್ರವಾಗಿ ತಾನೇ ಹಂದಿಯನ್ನು ಬೇಟೆಯಾಡುವುದೇ ಸರಿಯಾದ ಮಾರ್ಗವೆಂದು ಬೊಮ್ಮನಿಗೆ ಅನ್ನಿಸತೊಡಗಿತ್ತು. ಬೇಟೆ ಬೊಮ್ಮನಿಗೆ ಹೊಸತೇನು ಆಗಿರಲಿಲ್ಲ. ಅವನು ಚಿಕ್ಕವನಿರುವಾಗ ದೀಪಾವಳಿ ಸಮಯದಲ್ಲಿ ತಂದೆ, ಚಿಕ್ಕಪ್ಪಂದಿರು ನಾಯಿಯನ್ನು ಕರೆದುಕೊಂಡು ಹಂದಿ ಬೇಟೆಗಾಗಿ ಹೋಗುತ್ತಿದ್ದರು. ಅವರ ಜೊತೆಯಲ್ಲಿ ಬೊಮ್ಮನೂ ಹೋಗುತ್ತಿದ್ದ. ರಾತ್ರಿ ದೀವಟಿಕೆಯನ್ನು ಹಿಡಿದುಕೊಳ್ಳುತ್ತ, ತಲೆಗೆ ದೊಡ್ಡ ಚಾರ್ಜಿನ ಬ್ಯಾಟರಿಯನ್ನು ಕಟ್ಟಿಕೊಂಡು, ಮೂರು ನಾಲ್ಕು ನಾಡ ಬಂದೂಕ ತೆಗೆದುಕೊಂಡು ಬೇಟೆಯನ್ನು ಆಡುತ್ತಿದ್ದರು. ಅಲ್ಲಿಯೇ ಹಂದಿಯನ್ನು ಕೊಂದು, ಕೊಯ್ದು, ಮಾಂಸವನ್ನು ಗೋಣಿ ಚೀಲದಲ್ಲಿ ತುಂಬಿಕೊಂಡು, ಮರುದಿನ ಅದರ ಅಡುಗೆಯನ್ನು ಮಾಡುತ್ತಿದ್ದರು. ಆದರೆ ಏನು ಮಾಡುವುದು. ಈಗ ಬೇಟೆ ನಿಷಿದ್ಧ. ಫಾರೆಸ್ಟ್‌ನವರಿಗೆ ಬೇಟೆಯಾಡಿದ್ದು ಗೊತ್ತಾದರೆ ಚಡ್ಡಿ ಕಿತ್ತು ಹೋಗುವ ತನಕ ಬಾರಿಸುವುದು ನಿಜವಾಗಿತ್ತು. ನಾಲ್ಕೈದು ವರುಷದ ಹಿಂದೆ ಬೊಮ್ಮನ ನೆಂಟನೊಬ್ಬ ಬೇಟೆಗೆ ಹೋಗಿ, ಫಾರೆಸ್ಟ್ ಆಫೀಸರ್ ಕೈಯಲ್ಲಿ ಒದೆಯನ್ನು ತಿಂದು, ಶಿವಮೊಗ್ಗ ಜೈಲಿನಲ್ಲಿ ಒಂದೆರಡು ತಿಂಗಳು ಇದ್ದು, ಯಾರುಯಾರನ್ನು ಕಾಡಿ ಬೇಡಿ ಬೇಲ್ ಮೇಲೆ ಹೊರಗೆ ಬಂದಿರುವುದು ತಿಳಿದಿರುವ ವಿಚಾರವೇ ಆಗಿತ್ತು. ಹಾಗಾಗಿ ಬೇಟೆ ಎಂದರೆ ಯಾರು ಕೂಡ ಹತ್ತಿರ ಸುಳಿಯುತ್ತಿರಲಿಲ್ಲ. ಬೊಮ್ಮನಿಗೆ ಈಗ ವಯಸ್ಸಾಗಿದ್ದರಿಂದ ಬೇಟೆಗೆ ಬೇಕಾದ ಕಣ್ಣು ಅವನಲ್ಲಿ ಮಾಸಿದ್ದರಿಂದ ತಾನೊಬ್ಬನೇ ಮಾಡುವುದಕ್ಕೂ ಸಾಧ್ಯವಿರದೇ ಇದ್ದುದ್ದರಿಂದ ಆ ಯೋಚನೆಯನ್ನು ಕೈಬಿಟ್ಟಿದ್ದ. ಕೊನೆಗೊಂದು ದಿನ ಫಾರೆಸ್ಟ್ ಆಫೀಸರ್ ಬಳಿಗೆ ಹೋಗಿ ಹಂದಿಕಾಟದಿಂದ ಬಚಾವಾಗಲು ಏನಾದರೂ ಮಾಡಿಕೊಡುವಂತೆ ಬೇಡಿಕೊಂಡಿದ್ದ. ಅವರುಗಳು ಅವನಿಂದ ಹಣವನ್ನು ಪಡೆದುಕೊಂಡು ನಿಯಂತ್ರಣ ಮಾಡಿಕೊಡುವುದಾಗಿಯೂ ತಿಳಿಸಿದ್ದರು. ಕಾಟಾಚಾರಕ್ಕೆ ಒಂದೆರಡು ಬಾರಿ ಅವನ ಮನೆಯ ಹತ್ತಿರ ಸುಳಿದಿದ್ದರು. ಮತ್ತೆ ಅವರುಗಳ ಸುದ್ದಿಯೂ ಇರಲಿಲ್ಲ. ಈ ಕಡೆ ತೋಟ ಮಾತ್ರ ಹಂದಿಗಳ